


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

**ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೧೮

ರಾಜಾ ಮಹಾರಾಜರ ಪತ್ರ ಸಂಗ್ರಹದಲ್ಲಿ ಸ್ವಾಮೀಜಿಯವರ ಬಹು ಅಮೂಲ್ಯವಾದ ಸುದೀರ್ಘ ಪತ್ರವೊಂದು ಸಿಕ್ಕಿತ್ತು. ಆ ಪತ್ರದಲ್ಲಿ ಸ್ವಾಮೀಜಿಯವರು ಶ್ರೀಮಾತೆಯವರ ಬಗ್ಗೆ ತಮ್ಮ ನಿಲುವನ್ನು ಬಹಳ ಭಾವೋದ್ದೀಪ್ತ ಭಾಷೆಯಲ್ಲಿ ವ್ಯಕ್ತಪಡಿಸಿದ್ದರು. ಶ್ರೀಮಾತೆಯವರ ಮಹಿಮೆಯನ್ನು ಬಹು ತೇಜೋಭರಿತ ಭಾಷೆಯಲ್ಲಿ ವರ್ಣಿಸಿದ್ದನ್ನು ಓದಿ ವಿರಜಾನಂದರು ಮೂಕವಿಸ್ಮಿತರಾದರು. ಈ ಪತ್ರವನ್ನು ಅವರು ತಾವು ಕೆಲಸ ಮಾಡುತ್ತಿದ್ದ ಮೇಜಿನ ಡ್ರಾಯರಿನಲ್ಲಿ ಭದ್ರವಾಗಿ ಎತ್ತಿಟ್ಟಿದ್ದರು. ಕೆಲವು ದಿನಗಳ ಮಟ್ಟಿಗೆ ಅವರು ಬೇರೊಂದು ಸ್ಥಳಕ್ಕೆ ಹೋಗಿದ್ದಾಗ, ಅವರ ಅನುಪಸ್ಥಿತಿಯಲ್ಲಿ ಆ ಡ್ರಾಯರಿನ ವಸ್ತುಗಳನ್ನು ಸ್ಥಳಾಂತರಿಸುವ ಸಮಯದಲ್ಲಿ ಆ ಪತ್ರವು ಕಳೆದುಹೋಗಿತ್ತು. ಮಠಕ್ಕೆ ಹಿಂದಿರುಗಿ ಸ್ವಾಮೀಜಿಯವರದೇ ಕೈಬರಹದಲ್ಲಿದ್ದ ಆ ಅಮೂಲ್ಯ ಪತ್ರವನ್ನು ಕಾಣದೆ ಅವರು ತುಂಬಾ ದುಃಖಿತರಾದರು.

ರಾಜಾ ಮಹಾರಾಜರಿಗೆ ಈ ಸಮಯದಲ್ಲಿ ಅತ್ಯಂತ ಭೀಕರವಾದ ಟೈಫಾಯಿಡ್ ಬಂದಿತು. ವಿರಜಾನಂದರು ಪ್ರಾಣವನ್ನೇ ಪಣವೊಡ್ಡಿ ಅವರ ಸೇವೆಯನ್ನು ಮಾಡಿದರು. ಟೈಫಾಯಿಡ್‌ನಿಂದ ಸುಧಾರಿಸಿಕೊಂಡ ಮೇಲೆ ರಾಜಾ ಮಹಾರಾಜರು ವಾಯು ಬದಲಾವಣೆ ಹಾಗೂ ವಿಶ್ರಾಂತಿಗಾಗಿ ಸಿಮುಲ್‌ತಲಾ ಎಂಬಲ್ಲಿಗೆ ಹೋದರು. ಅವರ ಸೇವಕರಾಗಿ ವಿರಜಾನಂದರೂ ಹೊರಟರು. ಇವರೊಂದಿಗೆ ಕೊನ್ನಗರದ ಒಬ್ಬ ಡಾಕ್ಟರ್ ಸಹ ಹೋಗಿದ್ದನು. ಈ ಡಾಕ್ಟರ್ ಶ್ರೀರಾಮಕೃಷ್ಣರ ಬಳಿಗೆ ಹೋಗಿಬರುತ್ತಿದ್ದನು. ಈತ ಬಲು ರಸಿಕ. ಈತನೊಂದಿಗೆ ರಾಜಾ ಮಹಾರಾಜ್ ಕೂಡ ತುಂಬ ಹಾಸ್ಯ-ವಿನೋದಗಳಲ್ಲಿ ತೊಡಗುತ್ತಿದ್ದರು. ಡಾಕ್ಟರ್‌ಗೆ ತಂಬಾಕು ಸೇವಿಸುವ ಹಾಗೂ ಇನ್ನಿತರ ಚಟಗಳಿದ್ದವು. ಆತನು ಸ್ವಲ್ಪ ತಂಬಾಕನ್ನೇ ಅದೆಷ್ಟು ಕುಶಲತೆಯಿಂದ ಸಿದ್ಧಪಡಿಸುತ್ತಿದ್ದನೆಂದರೆ, ಅದು ಒಂದು ಗಂಟೆಯವರೆಗೂ ಉರಿಯುತ್ತಿತ್ತು. ಈ ಕೌಶಲವನ್ನು ಕಂಡು ವಿರಜಾನಂದರು ಅವಾಕ್ಕಾದರು! ಸಿಮುಲ್‌ತಲಾದ ನೆನಪುಗಳನ್ನು ವಿರಜಾನಂದರು ಮುಂದೊಮ್ಮೆ ಹೀಗೆ ಹೇಳುತ್ತಿದ್ದರು: ''ಸಿಮುಲ್‌ತಲಾ ಆಗ ತುಂಬ ನಿರ್ಜನವಾಗಿತ್ತು. ಮನೆ-ಮಠಗಳು ಇರಲಿಲ್ಲವೆಂದೇ ಹೇಳಬಹುದು. ರಾಜಾ ಮಹಾರಾಜರು ವಾಯು ಸಂಚಾರಕ್ಕೆ ಬಹಳವಾಗಿ ಹೋಗುತ್ತಿದ್ದರು. ನಾನು ಅವರಿಗೆ 'ಸೂಪ್' ಮಾಡಿಕೊಡುತ್ತಿದ್ದೆ. ಪ್ರಸಾದವಾಗಿ ನಾನೂ ಅದನ್ನೇ



ಕುಡಿಯುತ್ತಿದ್ದೆ. ಅಲ್ಲಿಗೆ ಹೋದದ್ದರಿಂದ ಮಹಾರಾಜರಿಗೆ ಒಳ್ಳೆಯ ಛೇಂಜ್ ಆಯಿತು. ಬೇಗನೆ ಚೇತರಿಸಿಕೊಂಡರು.''

ರಾಜಾ ಮಹಾರಾಜರು ಮಠಕ್ಕೆ ಹಿಂತಿರುಗಿದರು, ವಿರಜಾನಂದರೂ ಅವರ ಸೇವೆಯಲ್ಲಿ ನಿರತರಾದರು. ಅದು ೧೯೦೫ರ ಕೊನೆಯ ಭಾಗ. ಅಷ್ಟರಲ್ಲಿ ನ್ಯೂಯಾರ್ಕಿನಿಂದ ಸ್ವಾಮಿ ಅಭೇದಾನಂದರು ಮಠದಿಂದ ಒಬ್ಬರನ್ನು ಅಲ್ಲಿಗೆ ಕಳುಹಿಸಬೇಕೆಂದು ಕೇಳಿಕೊಂಡರು. ಹಾಗೆಯೇ ತ್ರಿಗುಣಾತೀತಾನಂದರೂ ಸಹ, ತಮ್ಮ ಸ್ಯಾನ್‌ಫ್ರಾನ್ಸಿಸ್ಕೋ ಕೇಂದ್ರದ ಕೆಲಸಗಳೊಂದಿಗೆ ಸಹಕರಿಸಲು ಒಬ್ಬ ಸಂನ್ಯಾಸಿಯನ್ನು ಕಳುಹಿಸಿರೆಂದು ಕೋರಿ ಪತ್ರ ಬರೆದಿದ್ದರು.

''ನೀನು ಹೋಗುವೆಯೇನು?'' ಎಂದು ರಾಜಾ ಮಹಾರಾಜ್ ವಿರಜಾನಂದರನ್ನು ಕೇಳಿದರು. ''ನನಗೆ ಲೆಕ್ಚರ್ ಕೊಡಲು ಬರುವುದಿಲ್ಲ'' ಎಂದು ಹೇಳಿ ಅವರು ಹೋಗಲೊಪ್ಪಲಿಲ್ಲ. ಆಗ ಮಠದಲ್ಲಿ ತುಳಸೀ ಮಹಾರಾಜರು (ಸ್ವಾಮಿ ನಿರ್ಮಲಾನಂದರು) ಇದ್ದರು; ಆಗ ತಾನೇ ಅಮೆರಿಕದಿಂದ ಹಿಂದಿರುಗಿದ್ದರು. ಅವರು ವಿರಜಾನಂದರನ್ನು ಒಪ್ಪಿಸಲಾಗದಿದ್ದಾಗ, ಶರತ್ ಮಹಾರಾಜರಿಗೆ ಒಪ್ಪಿಸುವ ಕೆಲಸವನ್ನು ಹಚ್ಚಿದರು. ಶರತ್ ಮಹಾರಾಜರು ವಿರಜಾನಂದರಿಗೆ ಧೈರ್ಯವೀಯುತ್ತಾ, ಅಮೆರಿಕಾಗೆ ಹೋಗಲು ಹುರಿದುಂಬಿಸಿದರು. ಕೊನೆಗೂ ಅವರ ಒತ್ತಾಯಕ್ಕೆ ಮಣಿಯಬೇಕಾಯಿತು. ವಿರಜಾನಂದರನ್ನು ಸ್ಯಾನ್‌ಫ್ರಾನ್ಸಿಸ್ಕೋಗೂ, ಬೋಧಾನಂದರನ್ನು ನ್ಯೂಯಾರ್ಕಿಗೂ ಕಳುಹಿಸಬೇಕೆಂದು ನಿರ್ಧರಿಸಲಾಯಿತು. ವಿರಜಾನಂದರು ಅಲ್ಲಿಗೆ ಅಗತ್ಯವಿದ್ದ ಪೋಷಾಕಿಗಾಗಿ ಅಳತೆಯನ್ನು ಕೊಟ್ಟು, ಹೊಲಿದಿಡಲು ಹೇಳಿ, ಶ್ರೀಮಾತೆಯವರ ಅನುಮತಿ ಮತ್ತು ಆಶೀರ್ವಾದಗಳನ್ನು ಪಡೆದು ಬರಲು ಜಯರಾಂಬಾಟಿಗೆ ಹೋದರು. ಅಲ್ಲಿಂದ ಕಂಖಲ್‌ಗೆ ಹೋಗಿ ಪೂಜ್ಯ ಹರಿ ಮಹಾರಾಜರನ್ನು ನೋಡಿಕೊಂಡು ಬರುವುದೆಂದು ನಿಶ್ಚಯಿಸಿಕೊಂಡರು. ಏಕೆಂದರೆ ದೂರದ ಅಮೆರಿಕಾಗೆ ಹೋದರೆ ಮತ್ತೆ ಯಾವಾಗ ಸ್ವದೇಶಕ್ಕೆ ಮರಳುವರೋ, ಮತ್ತೆ ಯಾವಾಗ ಶ್ರೀರಾಮಕೃಷ್ಣರ ಲೀಲಾಸಹಚರರೊಂದಿಗೆ ಭೇಟಿಯಾಗುವರೋ — ಯಾರಿಗೆ ಗೊತ್ತು?

ವಿರಜಾನಂದರು ಪ್ರಚಾರಕಾರ್ಯಕ್ಕಾಗಿ ಅಮೆರಿಕಾಗೆ ಹೋಗುತ್ತಿರುವುದನ್ನು ಕೇಳಿ ಶ್ರೀಮಾತೆಯವರು ಸರ್ವಾಂತಃಕರಣದಿಂದ ಅನುಮತಿಯಿತ್ತು ಆಶೀರ್ವದಿಸಿದರು. ವಿರಜಾನಂದರು ಶ್ರೀಮಾತೆಯವರಿಗೆ, ''ಅಮ್ಮಾ, ನಾನು ಶಕ್ತಿಹೀನ, ನನಗೆ ಏನೇನೂ ಗೊತ್ತಿಲ್ಲ. ಅಮೆರಿಕಾದಲ್ಲಿ ನನ್ನಿಂದ ಅದೇನು ಕೆಲಸ ನಡೆಯುವುದೋ ಕಾಣೆ. ನನ್ನ ಮೇಲೆ ಕೃಪೆಯಿಟ್ಟು ಆಶೀರ್ವದಿಸಿರಿ'' ಎಂದರು. ಶ್ರೀಮಾತೆಯವರು, ''ಮಗು, ಠಾಕೂರರು ನಿನ್ನನ್ನು ಸದಾ ರಕ್ಷಿಸುವರು, ಅವರ ಕೆಲಸವನ್ನು ಅವರೇ ಮಾಡಿಸಿಕೊಳ್ಳುವರು. 'ಹೇ ಠಾಕೂರ್, ನೀವು ನನ್ನನ್ನು ಇಹ-ಪರದಲ್ಲಿ ರಕ್ಷಿಸಿ' ಎಂದು ಅವರಲ್ಲಿ ಸದಾ ಪ್ರಾರ್ಥಿಸು'' ಎಂದು ಹೇಳಿದರು. ಆಗ ವಿರಜಾನಂದರು, ''ಅಮ್ಮಾ, ಸಾಧನೆಯನ್ನೇನೂ ಮಾಡಲಿಲ್ಲ, ಏನೂ ಲಭಿಸಲಿಲ್ಲ. ಠಾಕೂರರ ದರ್ಶನವನ್ನೂ ಪಡೆಯಲಿಲ್ಲ. ಮುಂದೇನು ಗತಿ?'' ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಮಾತೆಯವರು, ''ಮಗು, ಇನ್ನೂ ಎಷ್ಟು ಅಂತ ಸಾಧನೆ, ಭಜನೆ ಮಾಡುವೆ? ಠಾಕೂರರ ದರ್ಶನವನ್ನಂತೂ ನೀನು ಪಡೆದೇ ಇದ್ದೀಯಾ'' ಎಂದರು.

ಈ ಮಾತನ್ನು ಕೇಳಿದ ವಿರಜಾನಂದರು ಆಶ್ಚರ್ಯಚಕಿತರಾದರು. ಆ ಕ್ಷಣದಲ್ಲಿ ಅವರ ಮಾತಿನ ಗೂಢಾರ್ಥವನ್ನು ತಿಳಿಯಲಾರದೆ ಹೋದರು. ಅನಂತರ ಇದ್ದಕ್ಕಿದ್ದಂತೆ ಅದರರ್ಥ ಹೃದ್ಗತವಾಯಿತು, 'ಯಾವಾಗ ಶ್ರೀಮಾತೆಯವರ ದರ್ಶನವಾಗಿದೆಯೋ ಆಗಲೇ ಶ್ರೀರಾಮಕೃಷ್ಣರ ದರ್ಶನವಾದಂತೆಯೇ' ಎಂಬುದೇ ಶ್ರೀಮಾತೆಯವರ ಮಾತಿನ ಅರ್ಥ. ಈ ಅರಿವಿನಿಂದಾಗಿ ವಿರಜಾನಂದರ ಹೃದಯವು ಆನಂದೋತ್ಸಾಹದಿಂದ ತುಂಬಿಹೋಯಿತು. ಅವರು ಶ್ರೀಮಾತೆಯವರನ್ನು, ''ಅಮ್ಮಾ, ಅಮೇರಿಕಾಗೆ ಹೋದರೆ, ಅಲ್ಲಿ ಅನೇಕರು ಮಂತ್ರದೀಕ್ಷೆಗಾಗಿ ಪೀಡಿಸುತ್ತಾರೆ. ಆಗ ನಾನೇನು ಮಾಡಲಿ?'' ಎಂದು ಕೇಳಿದರು. ಅದಕ್ಕೆ ತಾಯಿಯವರು, ''ಕೊಡು, ಅದರಲ್ಲೇನು?'' ಎಂದು ಹೇಳಿ, ಯಾವ ಅಧಿಕಾರಿಗೆ ಯಾವ ಮಂತ್ರವನ್ನು ಉಪದೇಶಿಸಬೇಕು ಎಂಬುದನ್ನು ವಿಶದವಾಗಿ ತಿಳಿಸಿದರು. ಕೆಲವು ದಿನಗಳನ್ನು ಮಾತೃಸಾನ್ನಿಧ್ಯದಲ್ಲಿ ಕಳೆದರು. ಬಳಿಕ ಅವರಿಂದ ಆಶೀರ್ವಾದವನ್ನು ಪಡೆದು, ಕಂಖಲ್‌ಗೆ ಹೊರಟರು.

ಕಂಖಲ್‌ಗೆ ಹೋಗುವ ಮಾರ್ಗದಲ್ಲಿ ಕಾಶಿಯಲ್ಲಿ ಇಳಿದರು. ಅಲ್ಲಿದ್ದಾಗ ಅವರಿಗೆ ಶರತ್ ಮಹಾರಾಜರ ಪತ್ರವೊಂದು ಬಂತು. ಯಾವ ಹಡಗಿನಲ್ಲಿ ವಿರಜಾನಂದ ಮತ್ತು ಬೋಧಾನಂದರಿಗಾಗಿ ಟಿಕೇಟು ಕೊಂಡುಕೊಳ್ಳಲು ಪ್ರಯತ್ನಿಸುತ್ತಿದ್ದರೋ ಅದರಲ್ಲಿ ಸ್ಥಳಾವಕಾಶವಿರಲಿಲ್ಲ. ಆದರೆ ಅದಕ್ಕೂ ಮೊದಲು ಹೊರಡುವ ಇನ್ನೊಂದು ಹಡಗಿನಲ್ಲಿ ಅನಿರೀಕ್ಷಿತವಾಗಿ ಒಂದೇ ಒಂದು ಸ್ಥಳ ಖಾಲಿ ಇತ್ತು. ನ್ಯೂಯಾರ್ಕ್‌ನಲ್ಲಿ ಸ್ವಾಮಿ ಅಭೇದಾನಂದರಿಗೆ ಸಹಾಯಕರಿಲ್ಲದೆ ಬಹಳ ತೊಂದರೆಯಾಗುತ್ತಿದ್ದ ಕಾರಣ ಮೊದಲು ಬೋಧಾನಂದರನ್ನು ಆ ಹಡಗಿನಲ್ಲಿ ಕಳುಹಿಸಬೇಕೆಂಬುದು ಎಲ್ಲರ ಅಭಿಮತವಾಗಿತ್ತು. ವಿರಜಾನಂದರ ಹಡಗು ಮೇ ೨೨ರಂದು ಹೊರಡಲಿತ್ತು; ಅವರು ಒಬ್ಬರೇ ಹೋಗಬೇಕಾಗಿತ್ತು. ಪರಿಸ್ಥಿತಿಯನ್ನು ಬದಲಾಯಿಸಲು ಬೇರೆ ಉಪಾಯವಿಲ್ಲ. ವಿರಜಾನಂದರು ಈ ಅನಿರೀಕ್ಷಿತ ಘಟನೆಗಳಿಂದ ಕುಗ್ಗಿಹೋಗದೆ, ಕಡೇಪಕ್ಷ ಹೊರಡುವ ೧೫ ದಿನಗಳ ಮುಂಚೆಯೇ ಕೊಲ್ಕತ್ತೆಗೆ ಹಿಂದಿರುಗಬೇಕು ಎಂಬುದೇ ಆ ಪತ್ರದ ಸಾರಾಂಶವಾಗಿತ್ತು.

ಪತ್ರವನ್ನೋದಿ ವಿರಜಾನಂದರು ತುಂಬ ವಿಚಲಿತರಾದರು. ನಿರ್ಧರಿಸಿದ ಕಾರ್ಯಕ್ರಮವು ಹೀಗೆ ಅದಲುಬದಲಾಗಿ ಹೋದುದಕ್ಕೆ ಅವರ ಮನಸ್ಸಿಗೆ ನೋವಾಯಿತು. ಮೊದಲು, ಬೋಧಾನಂದರೊಂದಿಗೆ ಹೋಗುವುದೆಂದು ಭಾವಿಸಿದ್ದರು. ಆದರೆ ಪತ್ರದ ಪ್ರಕಾರ ಈಗ ಅವರು ಒಬ್ಬರೇ ಪ್ರಯಾಣ ಮಾಡಬೇಕಾಗಿದೆ; ಮನಸ್ಸು ಅದಕ್ಕೆ ಕಿಂಚಿತ್ತೂ ಒಪ್ಪುತ್ತಿಲ್ಲ. ಅಮೇರಿಕಾಗೆ ಹೋಗುವ ಆಲೋಚನೆಯನ್ನೇ ಸಂಪೂರ್ಣವಾಗಿ ಕೈಬಿಟ್ಟು, ಶರತ್ ಮಹಾರಾಜರಿಗೆ ಹೀಗೆಂದು ಪತ್ರ ಬರೆದರು: ''ನನಗೆ ಅಮೇರಿಕಾಗೆ ಹೋಗುವ ಇಚ್ಛೆಯಾಗಲಿ, ಉತ್ಸಾಹವಾಗಲಿ ಕಿಂಚಿತ್ತೂ ಇರಲಿಲ್ಲ. ದೇಹಾರೋಗ್ಯ ಸ್ವಲ್ಪ ಸುಧಾರಿಸಿದರೆ ಸಾಧನೆಗೆ ತೊಡಗುವ ಉದ್ದೇಶದಿಂದಲೇ ಮಾಯಾವತಿಯಿಂದ ಇಳಿದು ಬಂದಿದ್ದೆ. ನೀವೆಲ್ಲರೂ ಮತ್ತೆ ಮತ್ತೆ ಬಲವಂತಪಡಿಸಿದ್ದಕ್ಕೆ ಅಮೇರಿಕಾಗೆ ಹೋಗಲು ಸಿದ್ಧನಾದೆ. ಈಗ ಈ ರೀತಿ ಅಡ್ಡಿ ಅಡಚಣೆಗಳು ಬಂದಿರುವುದರಿಂದ ಇದು ದೈವಸಮ್ಮತವಲ್ಲವೆಂದೇ ತಿಳಿಯಬೇಕು. ದಯವಿಟ್ಟು ಇನ್ನು

ಮುಂದೆ ನನಗೆ ಅಮೇರಿಕಾಗೆ ಹೋಗಲು ಒತ್ತಾಯಿಸಬೇಡಿ. ನಾನು ಕಂಖಲ್‌ಗೆ ಹೋಗಿ ತಪಸ್ಸು ಮಾಡಬೇಕೆಂದು ನಿರ್ಧರಿಸಿರುವೆ. ಇದಕ್ಕೆ ನಿಮ್ಮ ಅಭ್ಯಂತರವೇನೂ ಇರುವುದಿಲ್ಲವೆಂದು ಆಶಿಸುವೆ.''

ವಿರಜಾನಂದರ ಪತ್ರವನ್ನೋದಿದ ಶರತ್ ಮಹಾರಾಜರು ಅವರಿಗೆ, ''ನೀನು ಮಠಕ್ಕೆ ಹೊರಟು ಬಾ, ಇಲ್ಲಿ ಸಾವಕಾಶವಾಗಿ ಮುಖತಃ ಎಲ್ಲ ಮಾತನಾಡೋಣ'' ಎಂದು ಬರೆದರು. ಆದರೆ ಮಠಕ್ಕೆ ಹೋದರೆ ಶರತ್ ಮಹಾರಾಜರ ಮಾತನ್ನು ಮೀರಲಾಗದು, ಅಮೇರಿಕಾಗೆ ಹೋಗಲೇಬೇಕಾಗುತ್ತದೆಂದು ವಿರಜಾನಂದರು ಯೋಚಿಸಿದರು. ಅದಲ್ಲದೆ ಈಗ ಮನಸ್ಸು ತಪಸ್ಸಿನೆಡೆಗೆ ವಾಲಿತ್ತು; ಅವಕಾಶವೂ ಸಿಕ್ಕಿತ್ತು. ಬಿಟ್ಟುಬಿಟ್ಟರೆ ಮತ್ತೆ ಯಾವಾಗ ಒದಗುವುದೋ ಯಾರಿಗೆ ಗೊತ್ತು? ಆದ್ದರಿಂದ ಅವರು ತಪಸ್ಸನ್ನಾಚರಿಸುವ ದೃಢಸಂಕಲ್ಪ ಮಾಡಿ ಕಂಖಲ್‌ಗೆ ಬಂದರು. ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಅವರಿಂದ ಎಲ್ಲವನ್ನೂ ಕೇಳಿ, ಅವರ ನಿರ್ಧಾರವನ್ನು ಅನುಮೋದಿಸುತ್ತ 'ಭೇಷ್! ಒಳ್ಳೆಯದನ್ನೇ ಮಾಡಿದೆ' ಎಂದರು. ವಿರಜಾನಂದರು ಅಮೆರಿಕಾಗೆ ಹೋಗುವ ವಿಷಯವನ್ನು ಕೇಳಿ ಸ್ವರೂಪಾನಂದರು ಮಾಯಾವತಿಯಿಂದ ಪತ್ರವೊಂದರಲ್ಲಿ ಮೊದಲೇ ಹೀಗೆ ಬರೆದಿದ್ದರು: ''ನಿನ್ನ ಏಪ್ರಿಲ್ ೩ರ ಪತ್ರದಿಂದ ನೀನು ನ್ಯೂಯಾರ್ಕಿಗೆ ಹೋಗಲಿರುವ ಶುಭ ಸಮಾಚಾರವನ್ನು ತಿಳಿದು ನಮಗೆಲ್ಲರಿಗೂ ಬಹಳ ಆನಂದವಾಯಿತು. ಈ ಸಂದರ್ಭದಲ್ಲಿ ನಮ್ಮೆಲ್ಲರ ಹೃತ್ಪೂರ್ವಕ ಶುಭಾಶಯಗಳನ್ನು ಸ್ವೀಕರಿಸು... ನಿನ್ನ ಪ್ರಯಾಣವು ಸುಗಮವಾಗಿರಲಿ, ಕೆಲಸವು ಸಾರ್ಥಕವಾಗಲಿ'' (ಮಾಯಾವತಿಯಿಂದ ೮.೪.೧೯೦೬ನೇ ತಾರೀಕಿನಂದು ಅವರು ಬರೆದ ಇಂಗ್ಲಿಷ್ ಪತ್ರದಿಂದ). ಅಷ್ಟರಲ್ಲೇ ಮತ್ತೆ ವಿರಜಾನಂದರು ಮನಸ್ಸನ್ನು ಬದಲಾಯಿಸಿದ್ದಾರೆಂದು ಕೇಳಿ, ಸ್ವರೂಪಾನಂದರು ಮತ್ತೊಂದು ಪತ್ರವನ್ನು ತಮಾಷೆಯಾಗಿ ಬರೆದರು: ''ಪ್ರಿಯ ವಿರಜಾ, — ನೀನು ನನ್ನೆಲ್ಲ ಶುಭಾಶಯಗಳನ್ನೂ ವ್ಯರ್ಥ ಮಾಡಿಬಿಟ್ಟೆಯಲ್ಲ!....'' (೪.೫.೧೯೦೬ರ ಪತ್ರ).

ಕಂಖಲ್‌ನಲ್ಲಿ ವಿರಜಾನಂದರು ತುಂಬ ನಿಷ್ಠೆ, ಅನುರಾಗದಿಂದ ಸಾಧನೆಯಲ್ಲಿ ಮುಳುಗಿದರು. ಕಂಖಲ್ ಸೇವಾಶ್ರಮವು ಆಗ ಸ್ವಾಮಿ ಕಲ್ಯಾಣಾನಂದರ ಅವಿಶ್ರಾಂತ ದುಡಿಮೆಯಿಂದ ಸುಪ್ರತಿಷ್ಠಿತವಾಗಿತ್ತು. ಒಂದು ದೇವರ ಮನೆಯಿತ್ತಾದರೂ ಅಲ್ಲಿ ವಿಧಿವತ್ತಾದ ಪೂಜೆಯೇನೂ ಆರಂಭವಾಗಿರಲಿಲ್ಲ. ಕೆಲವರು ಹೋಗಿ ದೇವರ ಪಟಕ್ಕೆ ಹೂವಿಟ್ಟು ಅಲಂಕರಿಸುತ್ತಿದ್ದರು ಅಷ್ಟೆ. ವಿರಜಾನಂದರು ಈಗ ಆ ದೇವರ ಮನೆಯಲ್ಲಿ ಜಪತಪಾದಿಗಳಲ್ಲಿ ತೊಡಗಿದರು. ಊಟಕ್ಕಾಗಿ ಆಶ್ರಮದ ಹೊರಗೆ ಹೋಗಿ ಮಧುಕರಿ ಮಾಡಿಕೊಂಡು ಬರುತ್ತಿದ್ದರು.

ಕಲ್ಯಾಣಾನಂದರ ಬಲವಂತಕ್ಕಾಗಿ ಆಶ್ರಮದ ಪಾಕಶಾಲೆಯಿಂದ ಬೇಯಿಸಿದ ತರಕಾರಿಗಳನ್ನು ಸ್ವೀಕರಿಸಿ, ಭಿಕ್ಷೆಯಿಂದ ಸಿಕ್ಕ ಚಪಾತಿ, ದಾಲ್‌ನೊಂದಿಗೆ ಸೇವಿಸುತ್ತಿದ್ದರು. ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ ; ಸಂಜೆ ಹರಿ ಮಹಾರಾಜರೊಂದಿಗೆ ಸ್ವಲ್ಪ ತಿರುಗಾಡಿಕೊಂಡು ಬರುತ್ತಿದ್ದರಷ್ಟೆ. ತೀವ್ರ ವೈರಾಗ್ಯದ ಮನಃಸ್ಥಿತಿಯಿಂದಾಗಿ ದಿನದಿನಕ್ಕೂ ಹೆಚ್ಚುಹೆಚ್ಚು ಶಾಂತಿ, ಆನಂದಗಳನ್ನು ಪಡೆಯಲಾರಂಭಿಸಿದರು. ಸ್ವಲ್ಪ ದಿನಗಳಲ್ಲಿ ಹರಿ ಮಹಾರಾಜರು ಉತ್ತರಕಾಶಿಗೆ ಹೊರಟುಹೋದರು. ವಿರಜಾನಂದರು ತಾವೂ ಅವರೊಂದಿಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದರು; ಅದಕ್ಕೆ ಹರಿ ಮಹಾರಾಜರು ಒಪ್ಪಲಿಲ್ಲ.

ಕಂಖಲಿನಲ್ಲಿ ವಿರಜಾನಂದರು ಕೆಲವು ತಿಂಗಳು ನಿರಾತಂಕವಾಗಿ ನಡೆಸುತ್ತಿದ್ದ ತಪಶ್ಚರ್ಯವು ಒಂದು ಅನಿರೀಕ್ಷಿತ ಘಟನೆಯಿಂದಾಗಿ ಕೊನೆಗೊಂಡಿತು. ಈ ಹಿಂದೆ ಕೆಲವೊಮ್ಮೆ ಏನು ನಡೆದಿತ್ತೋ ಅದರದೇ ಪುನರಾವರ್ತನೆ! 'ಈ ಸಲ ಭಗವಂತನ ಸಾಕ್ಷಾತ್ಕಾರವಾಗುವವರೆಗೂ ಇಲ್ಲಿಂದ ಕದಲುವುದಿಲ್ಲ' ಎಂದು ಅವರು ಅದೆಷ್ಟು ಸಲ ಸಂಕಲ್ಪ ಮಾಡಿ ತಪಸ್ಸಿಗೆ ತೊಡಗುತ್ತಿದ್ದರೋ ಅಷ್ಟು ಸಲವೂ ವಿಧಿಯ ಅದೃಶ್ಯ ಹಸ್ತವು ಒಂದಿಲ್ಲೊಂದು ವಿಘ್ನವನ್ನೊಡ್ಡಿ, ಅವರನ್ನು ಅವರ ಅವಿರತ ತಪಸ್ಯೆಯಿಂದ ಹೊರಗೆಳೆಯುತ್ತಿತ್ತು. ಸ್ವಾಮೀಜಿಯವರ ಕವಿತೆಯ ಸಾಲೊಂದು ಅವರ ನೆನಪಿಗೆ ಬಂತು —

**ರೆಕ್ಕೆಯಿಲ್ಲದ ವಿಹಂಗಮವೇ ಕೇಳು,**
**ಇದಲ್ಲ ನೀನು ತಪ್ಪಿಸಿಕೊಳ್ಳುವ ಪಥ.**

ಒಂದು ದಿನ ಬೇಲೂರು ಮಠದಿಂದ ಒಂದು ಟೆಲಿಗ್ರಾಂ ಬಂತು. ಅದರಲ್ಲಿ, 'ಸ್ವರೂಪಾನಂದರು ನೈನಿತಾಲ್‌ನಲ್ಲಿ ತುಂಬ ಅಸ್ವಸ್ಥರಾಗಿದ್ದಾರೆ, ಅವರೊಬ್ಬರೇ ಇರುವುದರಿಂದ ನೀವು ಯಾರಾದರೊಬ್ಬರು ಅವರ ಸೇವೆಗಾಗಿ ತಕ್ಷಣವೇ ಅಲ್ಲಿಗೆ ಹೋಗಬೇಕು' ಎಂಬ ವಾರ್ತೆಯಿತ್ತು. ಆದರಣೀಯ ಗುರುಭಾಯಿಯು ಕಠಿಣ ರೋಗಕ್ಕೆ ತುತ್ತಾದ ಸುದ್ದಿ ಕೇಳಿ, ಕಾಳೀಕೃಷ್ಣರ ಕೋಮಲ ಹೃದಯಕ್ಕೆ ಆಘಾತವಾಯಿತು. ಕಂಖಲಿನಲ್ಲಿ ಆಗ ಬ್ರಹ್ಮಚಾರಿ ಜ್ಞಾನ್ ಸಹ ಇದ್ದರು. ಅವರನ್ನೂ ಕರೆದುಕೊಂಡು ತಾವು ನೈನಿತಾಲಿಗೆ ತಕ್ಷಣವೇ ಹೋಗುವುದೆಂದು ವಿರಜಾನಂದರು ನಿರ್ಧರಿಸಿದರು. ಅವರು ಹೊರಡುವಷ್ಟರಲ್ಲಿ, 'ಜೂನ್ ೨೭ರಂದು (೧೯೦೬) ಸ್ವರೂಪಾನಂದರು ತಮ್ಮ ದೇಹವನ್ನು ತ್ಯಜಿಸಿದರು' ಎಂಬ ದುಃಖವಾರ್ತೆಯನ್ನು ಹೊತ್ತ ಮತ್ತೊಂದು ಟೆಲಿಗ್ರಾಂ ಬಂತು. ಅದರ ಬೆನ್ನಲ್ಲೇ ವಿರಜಾನಂದರಿಗೆ ಶರತ್ ಮಹಾರಾಜರಿಂದಲೂ ಪತ್ರ ಬಂತು. ಅದರಲ್ಲಿ, ''ನೀನು ಮತ್ತಿನ್ನೇನನ್ನೂ ಯೋಚಿಸದೆ, ಮಾಯಾವತಿಗೆ ಹೊರಡುವ ಮೊದಲ ರೈಲನ್ನು ಹಿಡಿ'' ಎಂದು ಬರೆದಿತ್ತು.[೧]

---

೧ ಪೂಜ್ಯ ಸ್ವಾಮಿ ಶಾರದಾನಂದರು 'ಪ್ರವಾಸಿ' ಪತ್ರಿಕೆಯ ಸಂಪಾದಕರ ಬೇಡಿಕೆಯ ಮೇರೆಗೆ ಸ್ವಾಮಿ ಸ್ವರೂಪಾನಂದರ ಬಗ್ಗೆ ಒಂದು ಪ್ರಬಂಧವನ್ನು ಬರೆದಿದ್ದರು. ಅದು ಆ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಪ್ರಬಂಧದ ಕೊನೆಯಲ್ಲಿ ಶಾರದಾನಂದರು ಹೀಗೆಂದು ಬರೆದಿದ್ದರು: ''ಹೂವು ಅರಳಿತ್ತು. ಭ್ರಮರವು

ಮಾಯಾವತಿಯಲ್ಲಾಗ ವಿಮಲಾನಂದರಾಗಲೀ, ಪ್ರಕಾಶಾನಂದರಾಗಲೀ ಇರಲಿಲ್ಲ, ಅವರೂ ಅಲ್ಲಿಂದ ಬಂದುಬಿಟ್ಟಿದ್ದರು. ಹಳಬರಾರೂ ಅಲ್ಲಿರಲಿಲ್ಲ. ಪುತ್ರಸಮಾನರಾದ ಸ್ವರೂಪಾನಂದರ ಅಕಾಲ ಮರಣದಿಂದ ಮಿಸೆಸ್ ಸೇವಿಯರ್ ಬಹಳ ನೊಂದು ಶೋಕವಿಹ್ವಲರಾಗಿರುತ್ತಾರೆಂಬುದನ್ನು ವಿರಜಾನಂದರು ಮನಗಂಡರು. ಹಳಬರಾಗಿದ್ದುದರಿಂದ ಸ್ವಾಭಾವಿಕವಾಗಿ ತಾವೇ ಅಲ್ಲಿಗೆ ಹೋಗುವುದು ಸೂಕ್ತವೆಂದು ಭಾವಿಸಿ, ತಮ್ಮ ಮನಸ್ಸನ್ನು ಗಟ್ಟಿ ಮಾಡಿಕೊಂಡು ಮಾಯಾವತಿಗೆ ಹೊರಡಲನುವಾದರು. ಸದ್ಯದ ಮಟ್ಟಿಗೆ ಅವರ ತಪೋಜೀವನ ಸ್ಥಗಿತಗೊಂಡಿತು.

೧೨

### ಮತ್ತೆ ಹಿಮಾಲಯಕ್ಕೆ!

ಶರತ್ ಮಹಾರಾಜರ ಆಣತಿಯಂತೆ ವಿರಜಾನಂದರು ಮಾಯಾವತಿಗೆ ಬರುತ್ತಿದ್ದಾರೆಂಬ ವಿಷಯವು ಮಿಸೆಸ್ ಸೇವಿಯರ್‌ಗೆ ಸ್ವಲ್ಪವೂ ತಿಳಿದಿರಲಿಲ್ಲ. ಅಕಸ್ಮಾತ್ತಾಗಿ ವಿರಜಾನಂದರನ್ನು ಅಲ್ಲಿ ನೋಡಿದ ಅವರ ವಿಸ್ಮಯಕ್ಕೆ ಪಾರವೇ ಇರಲಿಲ್ಲ. ಮೂರು ವರ್ಷಗಳ ನಂತರ ಅವರನ್ನು ಕಂಡ ಮದರ್ ಸೇವಿಯರ್ ಅವರ ಮಾತೃಹೃದಯ ಸಂತೃಪ್ತಿ ಹೊಂದಿತಾದರೂ, ಇದ್ದಕ್ಕಿದ್ದಂತೆ ಸ್ವರೂಪಾನಂದರ ನೆನಪಾಗಿ, ಹಿಡಿದಿಟ್ಟಿದ್ದ ಅವರ ದುಃಖದ ಕಟ್ಟೆಯೊಡೆದು ಹೊರಬಂದಿತು. ಆಕೆ ಬಾಲೆಯಂತೆ ಅಳತೊಡಗಿದರು. ವಿರಜಾನಂದರು ಅವರಿಗೆ ಸಮಯೋಚಿತವಾದ ಸಾಂತ್ವನವನ್ನಿತ್ತು ಸಮಾಧಾನಪಡಿಸಲೆತ್ನಿಸಿದರು. ಆದರೆ ಸ್ವರೂಪಾನಂದರ ಹಠಾತ್ ಮರಣದಿಂದ ಅವರ ಹೃದಯವು ಭಗ್ನಗೊಂಡಿತ್ತು.

ಸ್ವರೂಪಾನಂದರಂತೆ ಆಶ್ರಮದ ಎಲ್ಲ ಜವಾಬ್ದಾರಿಯನ್ನು ಹೊತ್ತು, ವ್ಯವಸ್ಥಿತ ರೀತಿಯಲ್ಲಿ ಸುಸೂತ್ರವಾಗಿ ನಡೆಸಿಕೊಂಡು ಹೋಗುವಂತಹ ದಕ್ಷ ಸಂನ್ಯಾಸಿಯನ್ನು ಬೇಲೂರು ಮಠವು ಕಳುಹಿಸುವ ಸಂಭವ ಬಹಳ ಕಡಿಮೆಯೇ. ಮಠದಲ್ಲಿರುವ ಸಂನ್ಯಾಸಿಗಳ ಸಂಖ್ಯೆಯಾದರೂ ಎಷ್ಟು? ಎಂದೆಲ್ಲ ಯೋಚಿಸಿದ್ದ ಮದರ್ ಸೇವಿಯರ್, ಇನ್ನು ಅದ್ವೈತ ಆಶ್ರಮವನ್ನು ಮುಚ್ಚಿಬಿಡಬೇಕಾಗುತ್ತದೆ ಎಂದೇ ಭಾವಿಸಿದ್ದರು. ಆದರೆ ಈಗ ವಿರಜಾನಂದರು ಬಂದದ್ದರಿಂದ ಆಸೆ ಸ್ವಲ್ಪ ಚಿಗುರಿತಾದರೂ, 'ಪ್ರಬುದ್ಧ ಭಾರತ'ದ ಸಂಪಾದನೆಯ ಗುರುತರ ಕಾರ್ಯದೊಂದಿಗೆ ಆಶ್ರಮವನ್ನು ನಡೆಸುವ ಕಠಿಣ ಕಾರ್ಯವನ್ನು ನೆನೆದು ಮದರ್ ಸೇವಿಯರ್‌ಗೆ ಅಂಥ ಭರವಸೆಯೇನೂ ಮೂಡಲಿಲ್ಲ. ವಿರಜಾನಂದರು ಅವರಿಗೆ, ''ತಾಯಿ ನೀವು ಹತಾಶರಾಗಬೇಡಿ. ಸ್ವಾಮೀಜಿಯವರು ಪ್ರಾರಂಭಿಸಿದ ಕೆಲಸವೆಂದಿಗೂ ನಿಂತುಹೋಗುವುದಿಲ್ಲ. ನಾನು ಅವರ ಪತಾಕೆ ಹಾರುವಂತೆ ಮಾಡಲು ಪ್ರಾಣವನ್ನು ಪಣವಾಗಿಟ್ಟು ಪ್ರಯತ್ನಿಸುವೆ'' ಎಂದರು. ಅದಕ್ಕೆ ಮದರ್ ಒಂದು ಮ್ಲಾನ ನಗೆ ಬೀರಿ, ''ನೀನೇಕೆ ಬಂದೆ? ಇದು ನಿನಗಾಗುವ ಕೆಲಸವಲ್ಲ. ಸ್ವರೂಪನ ವ್ಯಕ್ತಿತ್ವವಾದರೋ ಅಸಾಧಾರಣವಾಗಿತ್ತು. ಹಾಗೆಯೇ ಕೆಲಸ ಕಾರ್ಯಗಳಲ್ಲಿ ಬಹು ದಕ್ಷನಾಗಿದ್ದ'' ಎಂದರು.

ವಿರಜಾನಂದರು ಅದಕ್ಕೆ, ''ಆ ಮಾತೇನೋ ಸತ್ಯವೇ. ಆದರೆ ಮಠದ ಹಿರಿಯರು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನೊಬ್ಬ ಆಜ್ಞಾಧಾರಿ ಸೈನಿಕ, ಸೋಲಾದರೂ ಸರಿಯೇ, ಗೆಲುವಾದರೂ ಸರಿಯೇ — ನಾನು ಯುದ್ಧವನ್ನಂತೂ ಮಾಡಲೇಬೇಕಾಗಿದೆ'' ಎಂದರು. ಮಿಸೆಸ್ ಸೇವಿಯರ್‌ರವರ ಕರ್ತವ್ಯನಿಷ್ಠ ದೃಢ ಆಂಗ್ಲ ಮನಸ್ಸೂ ಕೂಡ ಈ ಉತ್ತರದಿಂದ ಚಕಿತಗೊಂಡಿತು.

ಕೆಲವು ದಿನಗಳಲ್ಲೇ ಸ್ವಾಮೀಜಿಯವರ ಪ್ರಿಯ ಶಿಷ್ಯರಲ್ಲೊಬ್ಬರಾದ ಸ್ವಾಮಿ ನಿರ್ಭಯಾನಂದರು (ಕಾನಾಯ್) ಮಾಯಾವತಿಗೆ ಬಂದರು. ಅವರನ್ನು ಶಾರದಾನಂದರು ಅಲ್ಲಿಗೆ ಕಾರ್ಯ ನಿರ್ವಾಹಕರನ್ನಾಗಿ ಕಳುಹಿಸಿದ್ದರು. ಅಲ್ಲದೆ, ತಾವು ಶೀಘ್ರವಾಗಿಯೇ ಅಲ್ಲಿಗೆ ಬಂದು ಎಲ್ಲ ವ್ಯವಸ್ಥೆ ಮಾಡುವುದಾಗಿಯೂ ವಿರಜಾನಂದರು ಅಂಜುವ ಆವಶ್ಯಕತೆಯೇನೂ ಇಲ್ಲವೆಂದೂ ತಿಳಿಸಿದ್ದರು.

ವಿರಜಾನಂದರೇನೂ ಅಂಜಿರಲಿಲ್ಲ ; ಅದಕ್ಕೆ ಸಮಯವಾದರೂ ಎಲ್ಲಿತ್ತು? ಜುಲೈ ತಿಂಗಳ 'ಪ್ರಬುದ್ಧ ಭಾರತ'ದ ಪ್ರಕಟನೆಯ ಕಾರ್ಯ ಮುಗಿದಿತ್ತಾದರೂ ಆಗಸ್ಟ್ ಪ್ರತಿಗಾಗಿ ಪ್ರೆಸ್ ಕಾಯುತ್ತಿತ್ತು. ಲೇಖನಗಳ ಸಂಗ್ರಹ ಮತ್ತು ಸಂಪಾದನೆಯ ಕಾರ್ಯವನ್ನು ಮುಗಿಸಿ, ಅದರ ಕರಡುಪ್ರತಿಯನ್ನು ಶೀಘ್ರವಾಗಿ ಮುದ್ರಿಸುವ ಅಗತ್ಯವಿತ್ತು. ವಿರಜಾನಂದರು ಈಗ ಕಾನಾಯಿಯ ಸಹಕಾರದೊಂದಿಗೆ ಆ ಕೆಲಸಕ್ಕಿಳಿದರು.

ಸ್ವಾಮಿ ಶಾರದಾನಂದರು ಮಾಯಾವತಿ ತಲುಪಿ ಮದರ್‌ಗೆ ಆಶ್ವಾಸನೆ ನೀಡುತ್ತಾ, ''ಸ್ವಾಮೀಜಿಯವರು ಸ್ಥಾಪಿಸಿದ ಈ ಆಶ್ರಮವು ಭಗವದಿಚ್ಛೆಯಿಂದ ಖಂಡಿತವಾಗಿ ನಡೆದುಕೊಂಡು ಹೋಗುವುದು. ಒಬ್ಬ ಸೈನಿಕ ಬಿದ್ದರೆ, ಮತ್ತೊಬ್ಬ ಸೈನಿಕ ಅವನ ಕೈಯಿಂದ ಧ್ವಜವನ್ನೆತ್ತಿಕೊಂಡು ಯುದ್ಧವನ್ನು ಮುಂದುವರಿಸುತ್ತಾನೆ; ಯುದ್ಧ ನಿಲ್ಲುವುದಿಲ್ಲ. ಆದ್ದರಿಂದ ಚಿಂತೆಗೆ ಕಾರಣವೆಲ್ಲಿ?'' ಎಂದರು. ಅವರು ವಿರಜಾನಂದರನ್ನು ಅದ್ವೈತ ಆಶ್ರಮದ ಅಧ್ಯಕ್ಷರನ್ನಾಗಿ ಮಾಡಿ, ತಾವೆಲ್ಲರೂ ಅವರ ಬೆಂಬಲಕ್ಕಿರುವುದಾಗಿಯೂ, ಕೆಲಸದಲ್ಲಿ ಯಾವ ರೀತಿಯ ಕಷ್ಟ ಬಂದರೂ ಸರ್ವ ಪ್ರಯತ್ನದಿಂದ ಅದನ್ನು ದೂರಗೊಳಿಸುವುದಾಗಿಯೂ ತಿಳಿಸಿದರು. ವಿರಜಾನಂದರ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತ, ''ನೀನು ಭಯಪಡಬೇಡ, ನಾನು ಪ್ರತಿ ತಿಂಗಳೂ 'ಪ್ರಬುದ್ಧ ಭಾರತ'ಕ್ಕೆ ಲೇಖನಗಳನ್ನು ಬರೆದು ಕಳುಹಿಸಿ ನನ್ನ ಕೈಲಾದಷ್ಟು ಸಹಾಯ ಮಾಡುವೆ'' ಎಂದು ಆಶ್ವಾಸನೆ ನೀಡಿದರು.

*(ಮುಂದುವರಿಯುವುದು)*

---

ದಿನವೂ ಮಧುಪಾನಕ್ಕಾಗಿ ಬರುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಬಿದ್ದ ಹಿಮದ ಮಳೆಯಿಂದ ಹೂವು ಕಮರಿಹೋಯಿತು. ಅಂಬ, ದೇವಿ, ಜಗನ್ಮಾತೆ! ನಿನ್ನ ಆ ಅಪೂರ್ವ ಹೂವಿನ ಮಹಿಮೆಯನ್ನು ಮಾನವರಾರೂ ಗುರುತಿಸರೆಂದು ಬಗೆದು, ಅದನ್ನು ನಿನ್ನ ಕೂದಲಲ್ಲಿ ಮುಡಿದು, ಅದರ ಗೌರವವನ್ನು ವರ್ಧಿಸಿದೆಯೇನು?''